ನ್ಯಾಯಪ್ರಮಾಣದ ಝುಗಳಗಳಿಗೂ [1]ದೂರವಾಗಿರು. ಯಾಕಂದರೆ ಅವು ನಿಷ್ಪ್ರಯೋಜಕವೂ ವ್ಯರ್ಥವೂ
೧೦ ಆಗಿವೆ. [2]ಪಾಷಂಡನಾದ ಮನುಷ್ಯನನ್ನು ಒಂದೆರಡು ಸಾರಿ ಬುದ್ಧಿ ಹೇಳಿದ ಮೇಲೆ ತಳ್ಳಿ ಬಿಡು.
೧೧ ಇಂಥವನು ತಬ್ಬಿಬ್ಬಾಗಿ, ತನಗೆ ತಾನೇ ಆಜ್ಞೆತೀರಿಸಿದವನಾಗಿ, ಪಾಪ ಮಾಡುತ್ತಾನೆಂದು ತಿಳಿದಿರು.

ಆಶೀರ್ವಾದವು.

೧೨ ನಾನು ಅರ್ತೆಮನನ್ನಾಗಲಿ, ತುಕಿಕನನ್ನಾಗಲಿ, ನಿನ್ನ ಹತ್ತರ ಕಳುಹಿಸಿದಾಗ, [3]ನಿಕೊಪೋಲಿಗೆ ನನ್ನ ಬಳಿಗೆ
೧೩ ಬರ ಜಾಗ್ರತೆ ಪಡು; ಯಾಕಂದರೆ ಅಲ್ಲಿ ಹಿಮಕಾಲ ಕಳೆಯ ನಿರ್ಣಯಿಸಿ ಕೊಂಡಿದ್ದೇನೆ. ನ್ಯಾಯಶಾಸ್ತ್ರಿ
ಯಾದ [4]ಜೇನನನ್ನೂ ಅಪೊಲ್ಲೋಸನನ್ನೂ, ಅವರು ಯಾವದರಲ್ಲಿಯೂ ಕೊರತೆ ಪಡದ ಹಾಗೆ, ಜಾಗ್ರತೆ
೧೪ ಯಾಗಿ ಮುಂಕಳುಹಿಸು. ಮತ್ತು [5]ನಮ್ಮವರು ಸಹ [6]ನಿಷ್ಫಲರಾಗಿರದ ಹಾಗೆ, ಅವಶ್ಯವಾದ ಕಾರ್ಯಗಳಿ
೧೫ ಗೋಸ್ಕರ ಸತ್ಕ್ರಿಯೆಗಳನ್ನು ನಡಿಸ ಕಲಿಯಲಿ. ನನ್ನ ಸಂಗಡ ಇರುವವರೆಲ್ಲರು ನಿನ್ನನ್ನು ವಂದಿಸುತ್ತಾರೆ.
ವಿಶ್ವಾಸದಲ್ಲಿ ನಮ್ಮನ್ನು ಸ್ನೇಹಿಸುವವರನ್ನು ವಂದಿಸು. ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

1. (೧ ತಿಮೊ. ೧. ೪. ವಚನದ ವ್ಯಾಖ್ಯಾನ ನೋಡ ಬೇಕು.) ವಾಗ್ವಾದದಿಂದ ಝುಗಳವೂ, ಝುಗಳದಿಂದ ವೇದಭ್ರಷ್ಟತ್ವವೂ ಉಂಟಾಗುವದರಿಂದ, ಇವುಗಳೆಲ್ಲಾ ನಿಷ್ಪ್ರಯೋಜನವಾದವುಗಳೆಂದು ಗ್ರಹಿಸಿ ಅವುಗಳನ್ನು ಬಿಟ್ಟು ದೂರವಾಗಿರ ಬೇಕು.

2. ತನ್ನ ಸ್ವಂತ ಅಭಿಪ್ರಾಯಗಳೇ ಸರಿ ಎಂದು ನಂಬಿ, ಸಭೆಯಲ್ಲಿ ಭೇದವನ್ನು ಉಂಟು ಮಾಡುವ ಮನುಷ್ಯನೇ ಪಾಷಂಡನು. (ಗಲಾ. ೪. ೧೭.) ಇಂಥವನು ಉತ್ತಮರ ಒಳ್ಳೇ ಆಲೋಚನೆಯನ್ನು ಕೇಳದೆ, ತನ್ನ ಅಭಿಪ್ರಾಯವೇ ಸರಿ ಎಂದು ಸಾಧಿಸುವನಾದರೆ, ಅವನು ಸಭೆಯಲ್ಲಿ ಸೇವೆ ಮಾಡುವದಕ್ಕೂ ಅನ್ಯೋನ್ಯ ಐಕ್ಯವಾಗಿರುವದಕ್ಕೂ ಅಪಾತ್ರನಾಗಿರುವದರಿಂದ ಅವನನ್ನು ಬಿಟ್ಟು ತೊಲಗ ಬೇಕು. ಅವನು ಸಭೆಯ ಯೋಚನೆ ಕೇಳದೆ ಮತವಿಷಯದಲ್ಲಿ ತನ್ನ ಸ್ವೇಚ್ಛೆಯ ಪ್ರಕಾರ ನಡಿಯ ತೀರ್ಮಾನವುಳ್ಳವನಾಗಿರುವದರಿಂದ ತನ್ನಲ್ಲಿ ತನಗೆ ಆಜ್ಞೆನಿರ್ಣಯಿಸಲ್ಪಟ್ಟಿರುವನು. (೧೧. ವ.) ಹೀಗೆ ತೃಣೀಕರವಾಗಿ ಪಾಪ ಮಾಡುವವನನ್ನು ಬಿಟ್ಟು (ಇಬ್ರಿ. ೧೦. ೨೬.) ಅವಶ್ಯವಾಗಿ ತೊಲಗ ಬೇಕು. (ಮತ್ತಾ. ೧೮. ೧೭. ೨ ಯೋಹಾ. ೧೦. ವ.)

3. ಆ ಕಾಲದಲ್ಲಿದ್ದ ಅನೇಕ ಪಟ್ಣಗಳಿಗೆ ನಿಕೊಪೋಲಿ ಎಂಬ ಹೆಸರಿತ್ತು. ಆದರೆ ಇಲ್ಲಿ ಹೇಳಲ್ಪಡುವ ನಿಕೊಪೋಲಿ ಎಂಬುವದು ಎಪೈರಸ್ ಎಂಬ ಶೀಮೆಯಲ್ಲಿದ್ದ ಪಟ್ಣವೆಂದು ತೋರುತ್ತದೆ.

4. ಜೇನನು ಎಂಬವನು ರೋಮಾ ನ್ಯಾಯಶಾಸ್ತ್ರಿಯಾಗಿ ಅಥವಾ ಯೆಹೂದ್ಯರ ನ್ಯಾಯಶಾಸ್ತ್ರಿಯಾಗಿ ಇರುವನು. ಅವನಿಗೂ ಅಪೊಲ್ಲೋಸನಿಗೂ ಪ್ರಯಾಣಕ್ಕೆ ಬೇಕಾದ ಸಾಮಾನುಗಳನ್ನು ಅನುಕೂಲ ಪಡಿಸಿ ಕೊಟ್ಟು, ಸ್ವಲ್ಪ ದೂರ ಅವರನ್ನು ಸಾಗ ಕಳುಹಿಸ ಬೇಕೆಂಬುವದು ಪೌಲನ ತಾತ್ಪರ್ಯವು.

5. ನಮ್ಮವರು ಎಂಬುವದು ಕ್ರಿಸ್ತನ ಶರಣಾಗತರಾದ ನಮ್ಮ ಸಹೋದರರೆಂಬ ಅರ್ಥವಾಗುವದು. (ರೋಮಾ. ೧೨. ೧೩.)

6. ನಿಷ್ಫಲರಾಗಿರದೆ, ದೇವರಿಗೆ ಸಮರ್ಪಕವಾದ ಫಲ ಕೊಡುವವರಾಗಿರ ಬೇಕಾದರೆ, ಜಾಗ್ರತೆಯಿಂದ ಕೆಲಸ ಮಾಡುವವರಾಗಿಯೂ ಸತ್ಕ್ರಿಯೆಗಳನ್ನು ಮಾಡುವವರಾಗಿಯೂ ಇರ ಬೇಕು.

# THE EPISTLE OF PAUL THE APOSTLE TO PHILEMON.

## ಅಪೊಸ್ತಲನಾದ ಪೌಲನು ಫಿಲೆಮೋನನಿಗೆ ಬರೆದ ಪತ್ರಿಕೆಯ ಪೀಠಿಕೆ.

ಫಿಲೆಮೋನನೆಂಬವನು ಕೊಲೊಸ್ಸೆ ಪಟ್ಣದವನಾಗಿಯೂ, (೨ನೇ ವಚನವನ್ನೂ ಕೊಲೊ. ೪. ೧೭. ವಚನವನ್ನೂ, ೧೦—೧೨. ವಚನಗಳನ್ನೂ ಕೊಲೊ. ೪. ೯. ವಚನವನ್ನೂ ಸರಿ ನೋಡ ಬೇಕು.) ಪೌಲನ ಪ್ರಸಂಗವನ್ನು ಕೇಳಿ, ಕ್ರಿಸ್ತನನ್ನು ವಿಶ್ವಾಸಿಸಿದವನಾಗಿಯೂ, (೧೯. ವ.) ಸುವಾರ್ತೆಯ ಸತ್ಯವನ್ನು ಎಲ್ಲಾ ಕಡೆಗಳಲ್ಲಿ ಪ್ರಸಿದ್ಧಿ ಮಾಡುವದಕ್ಕೆ ಪೌಲನಿಗೆ ಜತೆಕೆಲಸದವನಾಗಿಯೂ, ಭಕ್ತಿಯುಳ್ಳ ಕುಟುಂಬಕ್ಕೆ ಮುಖ್ಯಸ್ಥನಾಗಿಯೂ ಇದ್ದನು.

ಈ ಪತ್ರಿಕೆಯನ್ನು ಬರೆದ ಕಾರಣವೂ ಗುರಿಯೂ ಇದರಲ್ಲಿ ಸ್ಪಷ್ಟವಾಗಿ ತೋರುತ್ತದೆ. ಫಿಲೆಮೋನನಿಗೆ ದಾಸನ ಕೆಲಸ ಮಾಡಿ ಕೊಂಡಿದ್ದ ಒನೇಸಿಮನೆಂಬವನು ತನ್ನ ಯಜಮಾನನನ್ನು ವಂಚಿಸಿ, (೧೮. ವ.) ಓಡಿ ಹೋದ ಸಮಯದಲ್ಲಿ ಸ್ವೈವಸಂಕಲ್ಪದಿಂದ ರೋಮುಪುರಿಗೆ ಹೋಗಿ ಅಲ್ಲಿ ಶೆರೆಯಲ್ಲಿದ್ದ ಪೌಲನ ಪ್ರಸಂಗವನ್ನು ಕೇಳಿ, ಗುಣ ಪಟ್ಟು, ಕ್ರಿಸ್ತನ ದಾಸನಾದನು. ಹೀಗೆ ಅವನು ಗುಣ ಪಟ್ಟ ತರುವಾಯ ಸದ್ಗುಣ ಸತ್ಕ್ರಿಯೆಗಳುಳ್ಳವನಾಗಿಯೂ, ತನಗೆ ಬಹಳ ಪ್ರಯೋಜಕನಾಗಿಯೂ ಇದ್ದದರಿಂದ, ಅವನನ್ನು ಪೌಲನು ತನ್ನ ಬಳಿಯಲ್ಲಿಯೇ ಇಟ್ಟು ಕೊಳ್ಳುವದಕ್ಕೆ ಮನಸ್ಸಾಗಿದ್ದನು. ಆದರೂ ಅವನು ತನ್ನ ಯಜಮಾನನ ಬಳಿಗೆ ತಿರಿಗಿ ಹೋಗುವದು ನ್ಯಾಯವೆಂದು ಆಲೋಚಿಸಿ, ತುಕಿಕನು ಎಫೆಸಕ್ಕೂ ಕೊಲೊಸ್ಸೆಗೂ ಹೋದಾಗ ಒನೇಸಿಮನನ್ನು ಅವನ ಸಂಗಡ ಕಳುಹಿಸಿದನು. ಹಾಗೆಯೇ ಅವನು ಹೋಗುವ ಸಮಯದಲ್ಲಿ ಈ ಪತ್ರಿಕೆಯನ್ನು ಬರೆದು ಅವನ ಕೈಯಲ್ಲಿ ಕೊಟ್ಟು ಕಳುಹಿಸಿದನು. ಕೊಲೊಸ್ಸೆಯರಿಗೆ ಬರೆದ ಪತ್ರಿಕೆಯಲ್ಲಿ ಒನೇಸಿಮನನ್ನು ಕುರಿತು ಮೆಚ್ಚಿಕೆಯಾಗಿ ಬರೆದಿದ್ದಾನೆ. (ಕೊಲೊ. ೪. ೭—೯.) ಈ ಪತ್ರಿಕೆಯಲ್ಲಿ ದೈವಕೃಪೆಯಿಂದ ವಿಶೇಷವಾಗಿ ಅವನಿಗುಂಟಾದ ಮಾರ್ಪಡುವಿಕೆಯನ್ನು ತೋರಿಸಿ, ಇನ್ನು ಮೇಲೆ ಅವನನ್ನು ಸೇವಕನ ಹಾಗೆ ಮಾತ್ರವಲ್ಲ, ಪ್ರಿಯ ಸಹೋದರನ ಹಾಗೆಯೂ ಫಿಲೆಮೋನನು ಅವನನ್ನು ಅಂಗೀಕರಿಸಿ ತೆಗೆದು ಕೊಳ್ಳ ಬೇಕೆಂದು ಹೇಳಿ ಇದೆ.

ಫಿಲೆಮೋನನನ್ನು ಆಶೀರ್ವದಿಸಿದ ತರುವಾಯ, ಅವನ ಗುಣಶೀಲಕ್ಕಾಗಿ ದೇವರನ್ನು ಸ್ತುತಿಸಿ, (೧—೭.ವ.) ಅವನ ಸಂಗಡ ಅಧಿಕಾರದಿಂದ ಮಾತಾಡ ತಕ್ಕ ಬಾಧ್ಯತೆ ಇದ್ದಾಗ್ಯೂ, ಅವನು ಹಾಗೆ ಮಾಡದೆ, ಸುವಾರ್ತೆಯ ನಿಮಿತ್ತ ಕಟ್ಟಲ್ಪಟ್ಟವನಾಗಿಯೂ ವೃದ್ಧನಾಗಿಯೂ ಇದ್ದ ಪೌಲನು ಬಹು ದಯವಾಗಿ ಮಾತಾಡುತ್ತಾನೆ. (೮, ೯. ವ.) ಒನೇಸಿಮನು ಮಾಡಿದ ಅಪರಾಧವನ್ನು ಒಪ್ಪಿಕೊಂಡು, ದಯಾಪರನಾದ ದೇವರಿಂದ ಅವನಲ್ಲಿ ಉಂಟಾದ ಗುಣ ಪಡುವಿಕೆಯನ್ನು ಹೇಳಿ, ಇನ್ನು ಅವನನ್ನು ದಾಸನ ಹಾಗಲ್ಲ, ಪ್ರಿಯ ಸಹೋದರನ ಹಾಗೆ ನಡಿಸ ಬೇಕೆಂದು ಬೇಡಿ ಕೊಳ್ಳುತ್ತಾನೆ. (೧೦—೧೭.ವ.) ಫಿಲೆಮೋನನು ಒನೇಸಿಮನಿಂದ ನಷ್ಟ ಪಟ್ಟಿದ್ದರೆ, ಅದನ್ನು ತಾನು ಸಲ್ಲಿಸುವೆನೆಂದು ಮಾತು ಕೊಟ್ಟು, (೧೮—೨೦.ವ.) ನಂಬಿಕೆಯಿಂದಲೂ ವಂದನೆಯಿಂದಲೂ ಪತ್ರಿಕೆಯನ್ನು ಮುಗಿಸುತ್ತಾನೆ.

ಇದು ಎಫೆಸ್ಯರ ಪತ್ರಿಕೆಯೂ ಕೊಲೊಸ್ಸೆಯರ ಪತ್ರಿಕೆಯೂ ಬರೆಯಲ್ಪಟ್ಟ ಕಾಲದಲ್ಲಿ ೬೩ನೇ ವರುಷದಲ್ಲಿ ಬರಿಯಲ್ಪಟ್ಟಿತೆಂದು ತೋರುತ್ತದೆ. ಕ್ರಿಸ್ತನ ಮಾರ್ಗದಿಂದುಂಟಾಗುವ ಧರ್ಮಗುಣವೂ, ಪರೋಪಕಾರಚಿಂತೆಯೂ, ಉಪಚಾರವೂ, ಈ ಪತ್ರಿಕೆಯಲ್ಲಿ ಮಾಣಿಕ್ಯದಂತೆ ಪ್ರಕಾಶಿಸುತ್ತವೆ. ಯಜಮಾನರೆಲ್ಲರೂ ಫಿಲೆಮೋನನ ಹಾಗೆಯೂ, ಸೇವಕರೆಲ್ಲರೂ ಒನೇಸಿಮನ ಹಾಗೆಯೂ, ಯೇಸು ಕ್ರಿಸ್ತನ ಮಹಾ ಪ್ರೀತಿಯನ್ನು ಗ್ರಹಿಸಿ, ತಾಳ್ಮೆಯುಳ್ಳವರಾಗಿಯೂ ಪರಿಶುದ್ಧರಾಗಿಯೂ ನಡೆದರೆ, ನಾನು ದೊಡ್ಡವನು, ನೀನು ಚಿಕ್ಕವನು ಎಂಬ ಗರ್ವವಾದ ಆಲೋಚನೆಗಳೂ ಜಾತಿಭೇದಗಳೂ ಬಹು ಶೀಘ್ರವಾಗಿ ನಿವರ್ತಿಯಾಗಿ ಹೋಗುವವು.

# THE EPISTLE OF PAUL THE APOSTLE TO PHILEMON.

## ಅಪೊಸ್ತಲನಾದ ಪೌಲನು

# ಫಿಲೆಮೋನನಿಗೆ ಬರೆದ ಪತ್ರಿಕೆ.

ಆಶೀರ್ವಾದವು; ಫಿಲೆಮೋನನನ್ನು ಹೊಗಳಿ ಮಾತಾಡಿದ್ದು;
ಒನೇಸಿಮುನನ್ನು ಪ್ರೀತಿಯಿಂದ ಅಂಗೀಕರಿಸುವ ಹಾಗೆ ಬೇಡಿ ಕೊಂಡದ್ದು.

1. ಕ್ರಿಸ್ತ ಯೇಸುವಿನ [1]ಬಂಧದವನಾದ ಪೌಲನೂ, ಸಹೋದರನಾದ ತಿಮೊಥೆಯನೂ, ನಮ್ಮ ಪ್ರಿಯನೂ
೨ ಜತೆಕೆಲಸದವನೂ ಆದ ಫಿಲೆಮೋನನಿಗೂ, ಪ್ರಿಯ [2]ಅಪ್ಪಿಯಳಿಗೂ, ನಮ್ಮ ಜತೆದಂಡಿನವನಾದ ಅರ್ಕಿಪ್ಪ
೩ ನಿಗೂ, ನಿನ್ನ ಮನೆಯಲ್ಲಿರುವ ಸಭೆಗೂ— ನಮ್ಮ ತಂದೆಯಾದ ದೇವರಿಂದಲೂ, ಕರ್ತನಾದ ಯೇಸು ಕ್ರಿಸ್ತ
ನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ಆಗಲಿ.
೪ ನೀನು ಕರ್ತನಾದ ಯೇಸು ಕ್ರಿಸ್ತನ ಮೇಲೆಯೂ ಪರಿಶುದ್ಧರೆಲ್ಲರ ಮೇಲೆಯೂ ಇಡುವ ಪ್ರೀತಿಯನ್ನೂ
೫ [3]ವಿಶ್ವಾಸವನ್ನೂ ಕೇಳಿ, ನಿನ್ನ [4]ವಿಶ್ವಾಸದ ಅನ್ಯೋನ್ಯವು ಯೇಸು ಕ್ರಿಸ್ತನಿಗಾಗಿ ನಿಮ್ಮಲ್ಲಿರುವ ಎಲ್ಲಾ
೬ ಒಳ್ಳೇದರ ತಿಳುವಿಕೆಯಲ್ಲಿ ಬಲವಾಗಿರ ಬೇಕೆಂದು, ನಾನು ನನ್ನ ಪ್ರಾರ್ಥನೆಗಳಲ್ಲಿ ಯಾವಾಗಲೂ ನಿನ್ನನ್ನು
೭ ನೆನಪು ಮಾಡಿ, ನನ್ನ ದೇವರಿಗೆ ಸ್ತೋತ್ರ ಮಾಡುತ್ತೇನೆ. ಯಾಕಂದರೆ, ಸಹೋದರನೇ, ನಿನ್ನಿಂದ [5]ಪರಿಶು
ದ್ಧರ ಕರುಳುಗಳು ತುಷ್ಟಿಯಾದದರಿಂದ ನಿನ್ನ ಪ್ರೀತಿಗೋಸ್ಕರ ನಾವು ಬಹು ಆನಂದವನ್ನೂ ಆದರಣೆಯನ್ನೂ
ಹೊಂದಿದ್ದೇವೆ.

1. ಬೇರೆ ಪತ್ರಿಕೆಗಳಲ್ಲಿ ಹೇಳಿದ ಪ್ರಕಾರ ಪೌಲನು ತಾನು ಅಪೊಸ್ತಲನೆಂಬ ತನ್ನ ಉದ್ಯೋಗದ ಹೆಸರನ್ನು ಹೇಳದೆ, ಈ ವಚನದಲ್ಲಿಯೂ, ೯ನೇ ವಚನದಲ್ಲಿಯೂ ಎರಡು ಸಾರಿ ಬಂಧದವನೆಂದು ಹೇಳುತ್ತಾನೆ. ಇದು ಫಿಲೆಮೋನನಿಗೆ ಬಾಧ್ಯತೆಯ ಪ್ರಕಾರ ಬರೆದ ಪತ್ರಿಕೆಯಾದದರಿಂದ ಅವನ ಮನಸ್ಸು ಕರಗುವಂತೆಯೂ, ತಾನು ಬೇಡಿ ಕೊಂಡ ಕಾರ್ಯಕ್ಕೆ ಅವನು ಅನುಕೂಲಿಸುವ ಹಾಗೆಯೂ ತನ್ನ ಬಂಧನವನ್ನೂ ಸಂಕೋಲೆಯನ್ನೂ ತೋರಿಸಿ ಬರೆಯುತ್ತಾನೆ.

2. ಅಪ್ಪಿಯಳು ಫಿಲೆಮೋನನ ಹೆಂಡತಿಯಾಗಿರುವಳೆಂದು ತೋರುತ್ತದೆ. ಅರ್ಕಿಪ್ಪನೆಂಬವನು ಒಂದು ವೇಳೆ ಫಿಲೆಮೋನನ ಮಗನಾಗಿ ಅಥವಾ ಅವನ ಕುಟುಂಬಕ್ಕೆ ಶೇರಿದ ಬೇರೊಬ್ಬನಾಗಿ ಇರುವನು. ಅವನು ಕೊಲೊಸ್ಸೆ ಸಭೆಯಲ್ಲಿ ಬೋಧಕನಾಗಿಯೂ (ಕೊಲೊ. ೪. ೧೭.) ಪೌಲನು ತಿಮೊಥೆಯನು ಎಂಬವರ ಸಂಗಡ ಉಪದ್ರವನ್ನು ಅನುಭವಿಸಿದವನಾಗಿಯೂ ಇದ್ದನು. (ಫಿಲಿ. ೨. ೨೫.)

3. ಫಿಲೆಮೋನನು ಕ್ರಿಸ್ತನಲ್ಲಿ ಪೂರ್ಣವಾಗಿ ಇಟ್ಟದ್ದ ವಿಶ್ವಾಸವು ಆತನ ದಾಸರಾದ ಪರಿಶುದ್ಧವಂತರಿಗೆ ಅವನು ತೋರಿಸಿದ ಪ್ರೀತಿಯಿಂದ ಪ್ರಕಟವಾಯಿತು. (೬, ೭. ವ.) ಇದೇ ಪ್ರೀತಿಯಿಂದ ಕ್ರಿಯೆ ಮಾಡುವ ವಿಶ್ವಾಸವು.

4. ಫಿಲೆಮೋನನಲ್ಲಿದ್ದ ವಿಶ್ವಾಸಕ್ಕೆ ದೃಷ್ಟಾಂತವಾದ ಪ್ರೀತಿಯ ಕ್ರಿಯೆಗಳನ್ನು, ಮತ್ತೊಬ್ಬರು ಚನ್ನಾಗಿ ತಿಳಿದು ಅನುಭವಿಸುವದರಲ್ಲಿ, ಕ್ರಿಸ್ತನ ನಾಮವು ಮಹಿಮೆ ಪಡುವದಕ್ಕೆ ಹೇತುವೆಯಾದದರಿಂದ, ಪೌಲನು ಕೃತಜ್ಞತೆಯ ಮನಸ್ಸಿನಿಂದ ದೇವರನ್ನು ಸ್ತುತಿಸುತ್ತಾನೆ. (೬. ವ.) ಕ್ರೈಸ್ತರಲ್ಲಿ ತೋರುವ ಇಂಥಾ ಸದ್ಗುಣ ಸತ್ಕ್ರಿಯೆಗಳಿಂದಲೇ ಸುವಾರ್ತೆಯ ಅತಿಶಯವು ಮನುಷ್ಯರಿಗೆ ತಿಳಿಯಲೂ ಕ್ರಿಸ್ತನ ಮಹಿಮೆ ಪ್ರಕಟವಾಗಲೂ ಹೇತುವೆಯಾಗುವದು.

5. ಫಿಲೆಮೋನನ ಪ್ರೀತಿಯ ಕ್ರಿಯೆಗಳಿಂದ ಪರಿಶುದ್ಧರ ಕರುಳುಗಳು ತೃಪ್ತಿಯಾಗಿ ಆದರಣೆ ಹೊಂದಿದವು. ಇದಕ್ಕೆ ಅವನ ಮನೆಯಲ್ಲಿ ಕೂಡಿ ಬಂದ ಸಭೆಯೇ ಸಾಕ್ಷಿ. ಇಂಥಾ ಪ್ರೀತಿಯುಳ್ಳವನು ಸಹೋದರನೆಂದು ಕರೆಯಲ್ಪಡುವದಕ್ಕೆ ಪಾತ್ರನಾಗಿದ್ದಾನೆ.



೮ [1]ಆದ ಕಾರಣ ಯೋಗ್ಯವಾದದ್ದನ್ನು ನಿನಗೆ ಆಜ್ಞಾಪಿಸುವದಕ್ಕೆ ಕ್ರಿಸ್ತನಲ್ಲಿ ಬಹು ಧೈರ್ಯವಿದ್ದರೂ,
೯ ಅದನ್ನು ಬಿಟ್ಟು, ಮುದುಕನಾದ ಪೌಲನಂಥವನಾಗಿಯೂ, ಈಗ ಯೇಸು ಕ್ರಿಸ್ತನ ಬಂಧದವನಾಗಿಯೂ
೧೦ ಇದ್ದು, ಪ್ರೀತಿಗೋಸ್ಕರ ಬೇಡಿ ಕೊಳ್ಳುತ್ತೇನೆ. ಮುಂಚೆ ನಿನಗೆ [2]ನಿಷ್ಪ್ರಯೋಜಕನಾಗಿದ್ದು, ಈಗ ನಿನಗೂ
೧೧ ನನಗೂ ಪ್ರಯೋಜಕನಾಗಿರುವಂಥ, ನಾನು [3]ತಿರಿಗಿ ಕಳುಹಿಸಿದಂಥ, ನನ್ನ ಬಂಧಗಳಲ್ಲಿ ನಾನು ಪಡೆದ,
೧೨ [4]ನನ್ನ ಮಗನಾದ ಒನೇಸಿಮುನ ವಿಷಯ ನಿನ್ನನ್ನು ಬೇಡಿ ಕೊಳ್ಳುತ್ತೇನೆ. ನೀನು ಅವನನ್ನು ನನ್ನ ಕರುಳುಗ
೧೩ ಳೆಂದು ಅಂಗೀಕರಿಸು. ಅವನು ಸುವಾರ್ತೆಯ ಬಂಧಗಳಲ್ಲಿ ನಿನಗೆ ಬದಲಾಗಿ ನನಗೆ ಸೇವಿಸುವ ಹಾಗೆ,
೧೪ ಅವನನ್ನು ನನ್ನ ಹತ್ತರ ಇಟ್ಟು ಕೊಳ್ಳ ಇಚ್ಛೈಸಿದೆನು. ಆದರೆ ನಿನ್ನ ಉಪಕಾರವು ಅಗತ್ಯದ ಪ್ರಕಾರವಲ್ಲ,
೧೫ ಉಚಿತದ ಪ್ರಕಾರ ಇರುವ ಹಾಗೆ, ನಿನ್ನ ಚಿತ್ತವಿಲ್ಲದೆ ಏನೂ ಮಾಡ ಮನಸ್ಸಿಲ್ಲದೆ ಇದ್ದೆನು. ಯಾಕಂದರೆ
ನೀನು ಅವನನ್ನು ಇನ್ನು [5]ದಾಸನಾಗಿ ಅಲ್ಲ, ದಾಸನಿಗಿಂತ ಉತ್ತಮನಾಗಿ ಮಾಂಸದಲ್ಲಿಯೂ ಕರ್ತನಲ್ಲಿಯೂ
೧೬ ವಿಶೇಷವಾಗಿ ನನಗೆ, ಎಷ್ಟು ಹೆಚ್ಚಾಗಿ ನಿನಗೆ, ಪ್ರಿಯ ಸಹೋದರನಾಗಿ ಎಂದೆಂದಿಗೂ ಹೊಂದುವ ಹಾಗೆ,
೧೭ ಅವನು ಘಳಿಗೆ ಮಾತ್ರ ಅಗಲಿಸಲ್ಪಟ್ಟನೇನೋ? ಆದ ಕಾರಣ ನೀನು ನನ್ನನ್ನು [6]ಪಾಲುಗಾರನೆಂದು ನೆನ
೧೮ ಸಿದರೆ, ಅವನನ್ನು ನಾನೇ ಎಂದು, ಅಂಗೀಕರಿಸು. ಇದಲ್ಲದೆ ಅವನು ನಿನಗೆ ಏನಾದರೂ [7]ಅನ್ಯಾಯವನ್ನಾ
೧೯ ಗಲಿ ಸಾಲವನ್ನಾಗಲಿ ಮಾಡಿ ಇದ್ದರೆ, ಅದನ್ನು ನನ್ನ ಲೆಖ್ಖಕ್ಕೆ ಶೇರಿಸು. ಪೌಲನಾದ ನಾನು ಸ್ವಂತ
ಕೈಯಿಂದ ಬರೆದಿದ್ದೇನೆ; ನಾನೇ ಸಲ್ಲಿಸುವೆನು. [8]ನಿನ್ನನ್ನು ಸಹ ನನಗೆ ಕೊಡ ಹಂಗಿನಲ್ಲಿದ್ದೀ ಎಂದು ನಿನಗೆ

1. ನಿನ್ನ ಪ್ರೀತಿ ನನಗೆ ತಿಳಿದಿರುವದರಿಂದ ಒಂದು ಕಾರ್ಯವನ್ನು ನಿನ್ನ ಬಳಿಯ ಬೇಡಿ ಕೊಳ್ಳುತ್ತೇನೆಂಬ ತಾತ್ಪರ್ಯವಾಗಿದೆ. ಕ್ರಿಸ್ತನ ಮಹಾ ಪ್ರೀತಿಯಿಂದ ಹುಟ್ಟುವ ಪ್ರೀತಿಯ ಸ್ವಭಾವವೂ ಅದರ ಮಹಿಮೆಯೂ ಇದರಲ್ಲಿ ಚನ್ನಾಗಿ ತೋರುತ್ತದೆ. ಒನೇಸಿಮುನಿಗಾಗಿ ಪೌಲನು ಬೇಡುವ ವಿಧವು ಆಶ್ಚರ್ಯವಾಗಿದೆ. ತನಗೆ ಅಧಿಕಾರವಿದ್ದಾಗ್ಯೂ ಅದನ್ನು ಸ್ವಲ್ಪವಾದರೂ ತೋರಿಸದೆ, ಒಬ್ಬ ದಾಸನ ವಿಷಯ ಹೊಣೆಯಾಗಿ ಅವನ ಅಪರಾಧವು ತನ್ನ ಅಪರಾಧದಂತೆ ಒಪ್ಪಿ ಕೊಂಡು, ಅವನ ಯಜಮಾನನ ಮನಸ್ಸು ಕರಗುವ ಹಾಗೆ ಪ್ರೀತಿಯಿಂದ ಹೇಳಿದ ರೀತಿಯು ಎಷ್ಟೋ ಶ್ರೇಷ್ಠವಾದದ್ದು.

2. ಒನೇಸಿಮು ಎಂಬ ಹೆಸರಿಗೆ ಪ್ರಯೋಜಕನು ಎಂಬ ಅರ್ಥವುಂಟು. ಗುಣ ಪಡುವದಕ್ಕಿಂತ ಮುಂಚೆ ಫಿಲೆಮೋನನಿಗೆ ನಿಷ್ಪ್ರಯೋಜಕನಾಗಿ, ಅವನನ್ನು ವಂಚಿಸಿ, ಅವನನ್ನು ಬಿಟ್ಟು ಓಡಿ ಹೋದ ದಾಸನು ಗುಣ ಪಟ್ಟ ತರುವಾಯ, ಅವನಿಗೂ ಪೌಲನಿಗೂ ಲೌಕಿಕ ವಿಷಯಗಳಲ್ಲಿಯೂ ವೈದಿಕ ವಿಷಯಗಳಲ್ಲಿಯೂ ಪ್ರಯೋಜಕನಾದನು.

3. ಅವನನ್ನು ಈ ಪತ್ರಿಕೆಯ ಸಂಗಡ ನಿನ್ನ ಬಳಿಗೆ ಕಳುಹಿಸುವದರಿಂದ ನನ್ನ ಕರುಳುಗಳ ಹಾಗಿರುವ ಅವನನ್ನು ಪ್ರೀತಿಯಿಂದ ಅಂಗೀಕರಿಸ ಬೇಕು, ಅನ್ನುತ್ತಾನೆ. ತನಗೆ ಸಹಾಯವಾಗಿದ್ದ ಅವನನ್ನು ತನ್ನ ಬಳಿಯಲ್ಲಿ ಬಹಳ ಕಾಲ ಇಟ್ಟು ಕೊಳ್ಳ ಮನಸ್ಸಿದ್ದಾಗ್ಯೂ ಹಾಗೆ ಮಾಡದೆ, ಅವನನ್ನು ಅವನ ಯಜಮಾನನ ಬಳಿಗೆ ಸಂತೋಷವಾಗಿ ಕಳುಹಿಸುತ್ತಾನೆ.

4. ಯಜಮಾನನ ಹಾಗೆಯೇ (೧೯. ವ.) ದಾಸನು ಸಹ ಪೌಲನಿಗೆ ಮಗನೇ ಸರಿ. ಇವನು, ಪೌಲನು ಕಟ್ಟಲ್ಪಟ್ಟು ಕಾವಲಿಯಲ್ಲಿದ್ದಾಗ ಹೆತ್ತ ಮಗನಾದದರಿಂದ ಅವನು ಇವನಿಗೋಸ್ಕರ ಅಧಿಕ ಬಾಧ್ಯತೆಯನ್ನು ತೋರಿಸಿ ಮಾತಾಡುತ್ತಾನೆ. ತಾನು ಮುದಿ ಪ್ರಾಯದವನಾಗಿಯೂ ಯೇಸು ಕ್ರಿಸ್ತನ ನಿಮಿತ್ತ ಕಟ್ಟಲ್ಪಟ್ಟವನಾಗಿಯೂ ಇರುವ ಪೌಲನೆಂದು ಹೇಳಿ, ಫಿಲೆಮೋನನ ಬಳಿಯ ಬಾಧ್ಯತೆ ತೋರಿಸುತ್ತಾನೆ. ಯೆಹೂದ್ಯರ ಶ್ರೇಷ್ಠ ಸಂಘಕ್ಕೆ ಶೇರಿದವನಾಗಿದ್ದ ಪೌಲನು, ಸ್ತೆಫನನು ರಕ್ತಸಾಕ್ಷಿಯಾಗಿ ಸತ್ತ ಕಾಲದಲ್ಲಿ ಹೆಚ್ಚು ಕಡಿಮೆ ಮೂವತ್ತು ವರುಷದವನಾಗಿದ್ದದರಿಂದ ಈಗ ಅವನಿಗೆ ಅರುವತ್ತು ವರುಷ ಪ್ರಾಯವಾಗಿರುವದು. ಒನೇಸಿಮುನ ವಿಷಯ ಫಿಲೆಮೋನನ ಮನಸ್ಸು ಕರಗುವಂತೆ ತನ್ನ ಮುದಿತನವನ್ನೂ, ಬಂಧವನ್ನೂ, ಹೆತ್ತ ಮಗನೆಂಬ ಬಾಧ್ಯತೆಯನ್ನೂ ತೋರಿಸಿ ಮಾತಾಡುತ್ತಾನೆ.

5. ಒನೇಸಿಮುನು ಗುಣ ಪಟ್ಟದ್ದರಿಂದ ಲೌಕಿಕ ವಿಷಯದಲ್ಲಿಯೂ ವೈದಿಕ ವಿಷಯದಲ್ಲಿಯೂ ಅವನ ಸ್ಥಿತಿ ಮಾರ್ಪಟ್ಟಿತು. ದ್ವಿತೀಯ ನ್ಯಾ. ೧೫. ೧೨ಲ್ಲಿ ಇರುವ ಕಟ್ಟಳೆಯನ್ನು ಯೋಚಿಸಿದರೆ, ಅವನು ಬಿಡುಗಡೆ ಹೊಂದುವದು ನ್ಯಾಯವೆಂದು ಹೇಳಬಹುದು. ಸ್ವಲ್ಪ ಕಾಲ ನಿನ್ನನ್ನು ಬಿಟ್ಟು ಓಡಿ ಹೋದವನೆಂಬದಾಗಿ ಅಲ್ಲ, ಸ್ವಲ್ಪ ಕಾಲ ನಿನ್ನನ್ನು ಅಗಲಿದವನಾದ ಒನೇಸಿಮುನು ಪ್ರೀತಿಯ ಬಂಧದಿಂದ ಈಗ ನಿನ್ನ ಸಂಗಡ ಕಟ್ಟಲ್ಪಟ್ಟಿರುವದರಿಂದ ಅವನನ್ನು ದಾಸನಾಗಿ ಅಲ್ಲ, ದಾಸನಿಗಿಂತ ಮೇಲಾದವನಾಗಿಯೂ ಪ್ರಿಯ ಸಹೋದರನ ಹಾಗೆಯೂ ಅಂಗೀಕರಿಸ ಬೇಕು, ಅನ್ನುತ್ತಾನೆ.

6. ಇದು ವಿಶ್ವಾಸ ಪ್ರೀತಿ ಎಂಬ ಆತ್ಮಿಕ ವಿಷಯಗಳಲ್ಲಿ ಪಾಲುಗಾರನಾಗಿರುವದನ್ನು ಕುರಿತದ್ದು. (೫, ೭. ವ.)

7. ಒನೇಸಿಮುನು ಒಂದು ವೇಳೆ ತನ್ನ ಯಜಮಾನನನ್ನು ಹಣದ ವಿಷಯದಲ್ಲಾದರೂ ಬೇರೆ ವಿಷಯದಲ್ಲಾದರೂ ವಂಚಿಸಿ ಇರುವನೆಂದು ತೋರುತ್ತದೆ. ಪೌಲನು ತನ್ನನ್ನು ಒನೇಸಿಮುನಿಗೆ ಸಮ ಮಾಡಿ, ಅವನು ಮಾಡಿದ ಅನ್ಯಾಯವನ್ನು ಅಥವಾ ಸಾಲವನ್ನು ತನ್ನ ಮೇಲೆ ತೆಗೆದು ಕೊಂಡು, ತಾನೇ ಅದನ್ನು ಸಲ್ಲಿಸುವೆನೆಂದು ದೃಢವಾದ ಮಾತು ಕೊಡುತ್ತಾನೆ.

8. ನನ್ನ ಪ್ರಸಂಗವನ್ನು ಕೇಳಿ ಗುಣ ಪಟ್ಟ ನೀನು ನಿನ್ನ ಆಸ್ತಿಯನ್ನು ಮಾತ್ರವಲ್ಲ, ನಿನ್ನನ್ನೇ ನನಗೆ ಕೊಟ್ಟರೂ, ನ್ಯಾಯವೇ ಎಂದು ಹೇಳುತ್ತಾನೆ.

೨೦ ಹೇಳಲೋ? ಹೌದು, ಸಹೋದರನೇ, ನಾನು ನಿನ್ನಿಂದ ಕರ್ತನಲ್ಲಿ [1]ಸಂತೋಷ ಪಡಲಿ. ನನ್ನ ಕರುಳುಗಳನ್ನು
ಕರ್ತನಲ್ಲಿ ಉಪಶಮನ ಮಾಡು.
೨೧ ನಾನು ಹೇಳುವದಕ್ಕಿಂತ ಹೆಚ್ಚಾದದ್ದನ್ನು ಮಾಡುವಿ ಎಂದು ತಿಳಿದು, ನಿನ್ನ ವಿಧೇಯತ್ವವನ್ನು ನಂಬಿ, ನಿನಗೆ
೨೨ [2]ಬರೆದಿದ್ದೇನೆ. ಮತ್ತು ನನಗೆ ಬಿಡುದಿಯನ್ನು ಸಿದ್ಧ ಮಾಡು; ಯಾಕಂದರೆ ನಿಮ್ಮ [3]ಪ್ರಾರ್ಥನೆಗಳಿಂದ
ನಾನು ನಿಮಗೆ ದಯ ಪಾಲಿಸಲ್ಪಡುವೆನೆಂದು ನಿರೀಕ್ಷಿಸುತ್ತೇನೆ.
೨೩, ೨೪ ಕ್ರಿಸ್ತ ಯೇಸುವಿನಲ್ಲಿ ನನ್ನ ಜತೆಶೆರೆಯವನಾದ [4]ಎಪಫ್ರನೂ, ನನ್ನ ಜತೆಕೆಲಸದವರಾದ ಮಾರ್ಕನೂ,
೨೫ ಅರಿಸ್ತಾರ್ಕನೂ, ದೇಮನೂ, ಲೂಕನೂ ನಿನ್ನನ್ನು ವಂದಿಸುತ್ತಾರೆ. ನಮ್ಮ ಕರ್ತನಾದ ಯೇಸು ಕ್ರಿಸ್ತನ
ಕೃಪೆಯು ನಿಮ್ಮ ಆತ್ಮದ ಸಂಗಡ ಇರಲಿ. ಆಮೆನ್.

1. (೧೧. ವಚನದ ವ್ಯಾಖ್ಯಾನ ನೋಡ ಬೇಕು.) ಒನೇಸಿಮನಿಗೆ ಮಾಡುವ ಉಪಕಾರವು ತನಗೆ ಮಾಡಿದ ಉಪಕಾರವಾಗಿಯೂ, ತನ್ನ ಮನಸ್ಸಿಗೆ ಸಂತೋಷವಾಗಿಯೂ, ದೇವರಿಗೆ ಮಹಿಮೆಯಾಗಿಯೂ ಇರುವದೆಂದು ಹೇಳುತ್ತಾನೆ. ಬಾಧ್ಯತೆಯ ವಿಷಯವೂ ಉಪಚಾರದ ವಿಷಯವೂ ಈ ಪತ್ರಿಕೆ ಅತಿ ಶ್ರೇಷ್ಠವಾದದ್ದು.

2. ಈ ಪತ್ರಿಕೆಯನ್ನು ಪೌಲನು ತನ್ನ ಸ್ವಂತ ಕೈಯಿಂದ ಬರೆದನೆಂಬುವದು ನಿಶ್ಚಯವಾಗಿದೆ.

3. ನಿಮ್ಮ ಪ್ರಾರ್ಥನೆಗಳು ಅಂದರೆ, ಫಿಲೆಮೋನನೂ ಅವನ ಮನೆಯಲ್ಲಿ ಕೂಡಿ ಬರುವ ಸಭೆಯವರೂ ಮಾಡುವ ಪ್ರಾರ್ಥನೆಗಳು. ತಾನು ಬಂದಾಗ ತಂಗುವದಕ್ಕೆ ಒಂದು ಸ್ಥಳವನ್ನು ಸಿದ್ಧ ಮಾಡ ಬೇಕೆಂದು ಹೇಳುವದರಲ್ಲಿ, ದೇವರು ಅವರ ಪ್ರಾರ್ಥನೆಗಳನ್ನು ಕೇಳುವನೆಂಬುವದರ ವಿಷಯ ಅವನಲ್ಲಿದ್ದ ನಿಶ್ಚಯವು ತೋರುತ್ತದೆ.

4. ಎಪಫ್ರನು. ಕೊಲೊ. ೪. ೧೨. ಮಾರ್ಕನು. ಅಪೊ. ಕ್ರಿ. ೧೫. ೩೭. ಅರಿಸ್ತಾರ್ಕನು. ಕೊಲೊ. ೪. ೧೦. ದೇಮನು. ೨ ತಿಮೊ. ೪. ೧೦. ಲೂಕನು. ಅಪೊ. ಕ್ರಿ. ೧೬. ೧೦. ವಚನಗಳ ವ್ಯಾಖ್ಯಾನಗಳನ್ನು ನೋಡ ಬೇಕು.

# THE EPISTLE OF PAUL THE APOSTLE TO THE HEBREWS.

## ಅಪೊಸ್ತಲನಾದ ಪೌಲನು ಇಬ್ರೀಯರಿಗೆ ಬರೆದ ಪತ್ರಿಕೆಯ ಪೀಠಿಕೆ.

ಈ ಪತ್ರಿಕೆಯನ್ನು ಬರೆದವನ್ಯಾರೋ, ಇದು ಯಾರಿಗೆ ಬರೆಯಲ್ಪಟ್ಟಿತೋ, ಅದನ್ನು ಕುರಿತು ಈ ಪತ್ರಿಕೆಯಲ್ಲಿ ಹೇಳದೆ ಇರುವದರಿಂದ, ವಿದ್ವಾಂಸರಲ್ಲಿ ಇದರ ವಿಷಯ ಬಹಳ ತರ್ಕ ಉಂಟು. ಈ ಪತ್ರಿಕೆಯು ಪಾಲೆಸ್ತೀನದಲ್ಲಿರುವ ಸಭೆಗಳಲ್ಲಿ ಒಂದಕ್ಕೆ ಅಪೊಸ್ತಲನಾದ ಪೌಲನಿಂದ ಬರೆಯಲ್ಪಟ್ಟಿತೆಂಬುವದು ಸಾಧಾರಣ ಅಭಿಪ್ರಾಯವಾಗಿದೆ. ಆದರೆ ಶ್ರೇಷ್ಠ ವಿದ್ವಾಂಸರು ಬಹಳ ಮಂದಿ ಅದು ಸರಿಯಲ್ಲವೆಂದು, ನಾನಾ ಉದಾಹರಣೆಗಳಿಂದ ರೂಪಿಸುವದಕ್ಕೆ ಪ್ರಯತ್ನ ಪಟ್ಟಿದ್ದಾರೆ.

ಈ ಪತ್ರಿಕೆಯನ್ನು ಹೊಂದಿದ ಸಭೆಯವರಿಗೆ ಇದನ್ನು ಬರೆದವನು ಯಾರೆಂದು ಚನ್ನಾಗಿ ತಿಳಿದಿರುವದು. (೧೦. ३೪; ೧३. ೧೮, ೧೯, ೨३.) ಇದನ್ನು ಅವರು ಓದಿ ಕೊಂಡು ಬೇರೊಬ್ಬರಿಗೆ ಕಳುಹಿಸಿದಾಗ, ಗ್ರಂಥಕರ್ತನ ಹೆಸರನ್ನು ತಿಳಿಸಿ ಇರುವರು. ಎರಡನೇ ಶತಾಬ್ದದಲ್ಲಿ ಪೂರ್ವ ದಿಕ್ಕಿನ ಸಭೆಗಳವರೂ ಸಭಾಪಿತೃಗಳೆಂದು ಹೆಸರ್ಗೊಂಡ ಗ್ರಂಥಕಾರರೂ, ಈ ಪತ್ರಿಕೆಯನ್ನು ಅಪೊಸ್ತಲನಾದ ಪೌಲನು ಬರೆದನೆಂದು ಪೂರ್ವಿಕರು ತಮಗೆ ಹೇಳಿದರೆಂಬುವದನ್ನು ಬರೆದಿದ್ದಾರೆ.

ಈ ಪತ್ರಿಕೆಯನ್ನು ಬರೆದವನು ಯೆಹೂದ್ಯರ ಮತಾಚಾರಗಳನ್ನು ಚನ್ನಾಗಿ ತಿಳಿದವನಾಗಿಯೂ, ರಕ್ಷಣೆಯ ಮಾರ್ಗವನ್ನು ಯೆಹೂದ್ಯ ಜಾತಿಯವರು ತಿಳಿದು ಕೊಳ್ಳ ಬೇಕೆಂದು, ವಾಂಛೆಯುಳ್ಳವನಾಗಿಯೂ ಇದ್ದನು. ಪೌಲನಲ್ಲಿ ಈ ಎರಡು ಲಕ್ಷಣಗಳೂ ಸಂಪೂರ್ಣವಾಗಿದ್ದವೆಂಬುವದು ಪ್ರತ್ಯಕ್ಷವಾಗಿದೆ. (ರೋಮಾ. ೯. ೧೦. ೧೧ನೇ ಸಂಧಿಗಳು. ಫಿಲಿ. ३ನೇ ಸಂಧಿ.) ಈ ಪತ್ರಿಕೆಯಲ್ಲಿ ಹೇಳಲ್ಪಟ್ಟಿರುವ ಹೆಸರುಗಳನ್ನೂ, ಚರಿತ್ರ ಸಂಗತಿಗಳನ್ನೂ ನೋಡುವಾಗ, ಪೌಲನ ಚರಿತ್ರಕ್ಕೆ ಸಮ್ಮಂಧಪಟ್ಟದ್ದಾಗಿಯೇ ಇರುತ್ತದೆ. ಆದರೆ ಈ ಪತ್ರಿಕೆಯ ಭಾಷಾ ಧೋರಣೆ ಪೌಲನ ಬೇರೆ ಪತ್ರಿಕೆಗಳಿಗೆ ಭೇದವಾಗಿರುವದರಿಂದ ಇದು ಅವನಿಂದಲ್ಲ, ಅವನ ಸಂಗಡ ದೇವರ ಸೇವೆ ನಡಿಸಿದವರಲ್ಲಿ ಒಬ್ಬನಾಗಲಿ, ಅವನ ಶಿಷ್ಯರಲ್ಲಿ ಒಬ್ಬನಾಗಲಿ, ಬರೆದಿರ ಬಹುದೆಂದು ಕೆಲವರು ಹೇಳುತ್ತಾರೆ. ಆದಾಗ್ಯೂ ಕಾಲ ಭೇದದಿಂದಲೂ, ಸಭೆಗಳ ಭೇದದಿಂದಲೂ, ಒಬ್ಬನೇ ಅಪೊಸ್ತಲನ ಪತ್ರಿಕೆಗಳಲ್ಲಿ ಇಂಥಾ ಭೇದಗಳು ಇರ ಬಹುದಲ್ಲವೇ? ಈ ಪತ್ರಿಕೆಯಲ್ಲಿರುವ ವಾಕ್ಯಗಳೂ, ಆಕ್ಷೇಪಣೆಗಳಿಗೆ ಸಮಾಧಾನ ಹೇಳುವ ನ್ಯಾಯಗಳೂ, ಮನೋವಾಂಛೆಯನ್ನು ಪ್ರೇರಿಸ ತಕ್ಕ ವಚನಗಳೂ, ಪೌಲನ ಸಾಧಾರಣ ರೀತಿಗೆ ತಕ್ಕದ್ದಲ್ಲವೆಂದು ಹೇಳುವದಕ್ಕಾಗದು. ಈ ಪತ್ರಿಕೆಯು ಅಪೊ. ಕ್ರಿ. ೧३. ೧೭. ೨೪. ೨೬ನೇ ಸಂಧಿಗಳಲ್ಲಿರುವ ಪೌಲನ ಪ್ರಸಂಗಗಳಿಗೆ ಸರಿ ಬೀಳುತ್ತದೆ. ತನ್ನ ಸಂಗಡ ಪ್ರಯಾಣ ಮಾಡಿದ ಲೂಕನ ಕೈಯಿಂದ ಪೌಲನು ಈ ಪತ್ರಿಕೆಯನ್ನು ಬರೆಸಿದನೆಂಬುವದು, ಪೂರ್ವ ಸಭಾಪಿತೃಗಳಲ್ಲಿ ಕೆಲವರ ಅಭಿಪ್ರಾಯವಾಗಿತ್ತು. ಆದಾಗ್ಯೂ ಇದರ ವಿಷಯ ವೇದಶಾಸ್ತ್ರಿಗಳಲ್ಲಿ ಬಹಳ ವಾಗ್ವಾದಗಳುಂಟು. ಈ ಪತ್ರಿಕೆಯನ್ನು ಪೌಲನೇ ಬರೆದನೆಂದು ಕೆಲವರೂ, ಅಪೊಲ್ಲೋಸ್ ಬರೆದನೆಂದು ಕೆಲವರೂ, ಅನೇಕ ನ್ಯಾಯಗಳನ್ನು ಹೇಳಿ ವಾದಿಸುತ್ತಾರೆ. ವಿದ್ಯಾಸಂಪನ್ನರಾದ ಇವರು ನಿಸ್ಸಂದೇಹವಾಗಿ ಸ್ಥಾಪಿಸದೆ ಇರುವ ವಿಷಯವನ್ನು ನಾವು ರುಜು ಪಡಿಸುವದಕ್ಕೆ ಯತ್ನಯಿಸುವದು ತಕ್ಕದ್ದಲ್ಲ. ಈ ಪತ್ರಿಕೆಯನ್ನು ಬರೆದ ಗ್ರಂಥಕರ್ತನನ್ನು ಕುರಿತು ವಿದ್ವಾಂಸರಲ್ಲಿ ಸಂದೇಹವಿದ್ದಾಗ್ಯೂ, ಇದು ಪರಿಶುದ್ಧಾತ್ಮನ ವರವನ್ನು ಹೊಂದಿದ ಒಬ್ಬನಿಂದ ಬರಿಯಲ್ಪಟ್ಟಿತೆಂಬುವದನ್ನು ಕುರಿತು ಯಾರೂ ಸಂದೇಹ ಪಡುವದಿಲ್ಲ. ಇದು ನಮ್ಮ ಕಾರ್ಯಕ್ಕೆ ಸಾಕಾದ ವಿಶೇಷ ವಿಷಯವಾಗಿದೆ.

ಯೆರೂಸಲೇಮು ಪಟ್ಟವು ನಾಶವಾಗುವದಕ್ಕಿಂತ ಮುಂಚೆ ಈ ಪತ್ರಿಕೆ ಬರಿಯಲ್ಪಟ್ಟಿತೆಂಬುವದು ಪ್ರತ್ಯಕ್ಷವಾಗಿದೆ. ಇದು ಇಬ್ರೀಯ ಕ್ರೈಸ್ತರಿಗೆ ಬರೆಯಲ್ಪಟ್ಟದ್ದು. ಅವರು ಒಂದು ದೇಶದಲ್ಲಾದರೂ ಪಟ್ಟದಲ್ಲಾದರೂ ವಾಸ ಮಾಡಿದವರಾಗಿಯೂ, ನೂತನವಾಗಿ ಸ್ಥಾಪಿಸಲ್ಪಟ್ಟ ಸಭೆಗೆ ಶೇರಿದವರಾಗಿಯೂ ಇದ್ದರು. ಅವರ ಬೋಧಕರಲ್ಲಿ ಕೆಲವರು ಸತ್ತು ಹೋಗಿದ್ದರೆಂದೂ, ಆ ಕಾಲದಲ್ಲಿದ್ದ ಬೇರೆ ಬೋಧಕರಿಗೆ ಅವರು ವಿಧೇಯರಾಗಿ ನಡಿಯ ಬೇಕೆಂದೂ ಹೇಳಲ್ಪಟ್ಟಿದೆ. (೧३. ೧೭.) ಆ ಇಬ್ರೀಯ ಕ್ರೈಸ್ತರು ಯೆಹೂದ್ಯರ ವೇದಾಚಾರಗಳನ್ನೆಲ್ಲಾ ಚನ್ನಾಗಿ ತಿಳಿದವರಾಗಿದ್ದದ್ದಲ್ಲದೆ, ಪುರಾತನ ಮಾರ್ಗವಾದ ಅದರ ಆಡಂಬರವನ್ನು ನೋಡಿ ಇದ್ದದರಿಂದಲೂ, ಆ ಕಾಲದಲ್ಲಿ ಮಾರ್ಗದ ವಿಷಯ ಸಂಭವಿಸಿದ್ದ ಹಿಂಸೆಗೆ ಅಂಜಿ ಕೊಂಡಿದ್ದದರಿಂದಲೂ, ಅವರು ಕ್ರಿಸ್ತನ ಮಾರ್ಗವನ್ನು ಬಿಟ್ಟು, ತಿರಿಗಿ ಯೆಹೂದ್ಯ ಮತವನ್ನು ಅನುಸರಿಸ ಹೇತುವೆಯಾಗಿದ್ದದರಿಂದಲೂ, ಅವರು ಪಾಲೆಸ್ತೀನದ ಯೆರೂಸಲೇಮಿನಲ್ಲಾಗ್ಯೆದರೂ, ಕೈಸರ್ಯೆಯದಲ್ಲಾಗ್ಯೆದರೂ ವಾಸಿಸುತ್ತಾ ಇದ್ದವರಾಗಿರ ಬೇಕೆಂದು ತೋರುತ್ತದೆ.

ಹೀಗೆ ಅವರು ಮಾರ್ಗ ತಪ್ಪಿ ನಡಿಯ ಹೇತುವೆಯುಳ್ಳವರಾಗಿದ್ದದರಿಂದ, ಅವರನ್ನು ಎಚ್ಚರಿಸಲೂ, ಸತ್ಯಮಾರ್ಗದಲ್ಲಿ ಅವರನ್ನು ನೆಲೆಗೊಳ್ಳಿಸಲೂ, ತಕ್ಕದ್ದಾಗಿ ಈ ಪತ್ರಿಕೆ ಬರಿಯಲ್ಪಟ್ಟಿತು. ಮೋಶೆಯ ನ್ಯಾಯಪ್ರಮಾಣವನ್ನು ಕುರಿತು ಅವರಲ್ಲಿದ್ದ ತಪ್ಪಾದ ಆಲೋಚನೆಗಳನ್ನು ಖಂಡಿಸುವದೂ, ಕ್ರಿಸ್ತಮಾರ್ಗದ ಸತ್ಯಗಳನ್ನೂ ಉಪದೇಶಗಳನ್ನೂ ಅವರಿಗೆ ತಿಳಿಯ ಪಡಿಸುವದೂ, ಆದ ಸಂಗತಿಗಳೇ ಈ ಪತ್ರಿಕೆಯ ತಾತ್ಪರ್ಯವು. ಕ್ರಿಸ್ತಮಾರ್ಗವನ್ನು ಅನುಸರಿಸಿದ್ದ ಅವರಲ್ಲಿ